ಕೊಲ್ಲುತ್ತ ಹೋದರೆ ನಡೆಯುವುದಿಲ್ಲ. ಹೇಗಾದರೂ ಮಾಡಿ ಸೇನಾಧಿಪತಿಯನ್ನು ಹಿಡಿದುಬಿಟ್ಟರೆ ಇಡೀ ಸೈನ್ಯವನ್ನು ಗೆದ್ದಂತಾಗುತ್ತದೆ. ಹಾಗೆಯೇ ಆ ಅಕ್ಷರವನ್ನು ಅರಿತರೆ ಎಲ್ಲವನ್ನೂ ಅರಿತಂತಾಗುತ್ತದೆ.

ಒಂಬತ್ತನೆಯ ಅಧ್ಯಾಯದ ಮೊದಲ ಮಂತ್ರದಲ್ಲಿ ಶ್ರೀಕೃಷ್ಣನು ಜ್ಞಾನವನ್ನು ಕುರಿತು ಪ್ರಸ್ತಾಪಿಸುತ್ತ **'ವಿಜ್ಞಾನಸಹಿತಂ'** ಎಂಬ ವಿಶೇಷಣವನ್ನು ಹೇಳುತ್ತಾನೆ– ಅಂದರೆ ಅನುಭವಾತ್ಮಕವಾದ ಜ್ಞಾನ ಎಂದು ಅರ್ಥ. ಈ ಜ್ಞಾನವನ್ನೇ ಬುದ್ಧನು **'ಬೋಧಿ'** ಎಂದು ಕರೆಯುತ್ತಾನೆ. ಅವನ ಪ್ರಕಾರ ಇನ್ನೆರಡು ಬಗೆಯ ಜ್ಞಾನಗಳಿವೆ: ಒಂದು ವಿಚಾರಪರವಾದುದು– ತತ್ತ್ವಶಾಸ್ತ್ರ ಮುಂತಾದ ಬೌದ್ಧಿಕ ಜ್ಞಾನ, ಇನ್ನೊಂದು ವೈಯಕ್ತಿಕ ಆಸೆ, ಆಕಾಂಕ್ಷೆಗಳನ್ನು ಅವಲಂಬಿಸಿದ ಅಭಿಪ್ರಾಯ ಅಥವಾ ಅಭಿಮತಗಳು. ಮೂಲಭೂತ ಅನುಭವಾತ್ಮಕ ಜ್ಞಾನವು ಮೊದಲು ವಿಚಾರದ ಮೂಲಕ ವಿಕೃತಗೊಳ್ಳುತ್ತದೆ, ಅನಂತರ ಆಸೆ, ಆಕಾಂಕ್ಷೆಗಳ ಮೂಲಕ ಮತ್ತಷ್ಟು ವಿಕೃತಗೊಳ್ಳುತ್ತದೆ. ಮೊದಲು ನಮ್ಮ ಆಸೆ–ಆಕಾಂಕ್ಷೆಗಳಿಂದ ದೂರವಾಗಬೇಕು, ಮುಂದೆ ನಮ್ಮ ವಿಚಾರವನ್ನೂ ಮೀರಿಹೋಗಬೇಕು ಎಂಬುದನ್ನು ಇದು ಸೂಚಿಸುತ್ತದೆ.

ನಮ್ಮ ಮಿದುಳು ಬೆಳೆದಂತೆಲ್ಲ ನಮ್ಮ ಸತ್ಯದ ಕಲ್ಪನೆಯೂ ಉನ್ನತೋನ್ನತವಾಗುತ್ತದೆ ಎಂದು ನರವಿಜ್ಞಾನಿಗಳು ಹೇಳುತ್ತಾರೆ. ತುಂಬ ಹಿಂದುಳಿದ ಜನರಲ್ಲಿ ಭಾವೋದ್ವೇಗಗಳಿಗೆ ಸಂಬಂಧಿಸಿದ ಮಿದುಳಿನ ಕೇಂದ್ರವು ತುಂಬ ಪ್ರಬಲವಾಗಿರುತ್ತದೆ. ಅವರಲ್ಲಿ ವಿಚಾರಕ್ಕೆ ಸಂಬಂಧಿಸಿದ ಮಿದುಳಿನ ಭಾಗವು ಇನ್ನೂ ಅಂಕುರಾವಸ್ಥೆಯಲ್ಲಿರುತ್ತದೆ. ಆದ್ದರಿಂದ ಅವರು ವಿವಿಧ ಭಾವೋದ್ವೇಗಗಳಿಂದ ಕೂಡಿದ, ಭಯವನ್ನು ಹುಟ್ಟಿಸುವ ಸರ್ವಾಧಿಕಾರಿಯಾದ ದೇವರ ಕಲ್ಪನೆಯನ್ನು ಹೊಂದಿರುತ್ತಾರೆ. ಸಂಸ್ಕೃತಿಯು ಮುಂದುವರಿದಂತೆಲ್ಲ ಮಿದುಳೂ ಬೆಳೆಯುತ್ತ ಹೋಗುತ್ತದೆ, ಆಗ ದಯಾಮಯನಾದ ದೇವರ ಕಲ್ಪನೆ ಪ್ರಚಾರಕ್ಕೆ ಬರುತ್ತದೆ. ವೈಚಾರಿಕ ಮಿದುಳು ಹೆಚ್ಚು ಹೆಚ್ಚು ಬೆಳೆದಂತೆಲ್ಲ, ದೇವರ ಬಗೆಗಿನ ನಮ್ಮ ಕಲ್ಪನೆ ಇನ್ನೂ ಸೂಕ್ಷ್ಮವಾಗುತ್ತ, ವಾಙ್ಮನಾತೀತವಾದ, ಸರ್ವಾತೀತವಾದ, ಸರ್ವಾತ್ಮವಾದ, ನಿರ್ಗುಣ–ನಿರಾಕಾರ ಸತ್ಯದ ಆತ್ಯಂತಿಕ ಹಂತವನ್ನು ಮುಟ್ಟುತ್ತದೆ. ಇದು ಮಿದುಳಿನ ಹಂತವನ್ನೂ ಮೀರಿಹೋಗುವ ಅನುಭವಾತ್ಮಕ ಜ್ಞಾನ – **'ಸವಿಜ್ಞಾನ'**.

ಶ್ರೀರಾಮಕೃಷ್ಣರೂ **'ವಿಜ್ಞಾನ'**ವನ್ನು ಕುರಿತಾಗಿ ಹೇಳುತ್ತಾರೆ. ಅವರ ಪ್ರಕಾರ 'ನೇತಿ ನೇತಿ' ಮಾರ್ಗವನ್ನು ಅನುಸರಿಸಿ ಆತ್ಮಾನುಭೂತಿಯನ್ನು ಪಡೆಯುವುದು **'ಜ್ಞಾನ'**. ಅನಂತರ ಎಲ್ಲವನ್ನೂ ಭಗವನ್ಮಯವಾಗಿ ಕಾಣುವುದು **'ವಿಜ್ಞಾನ'**. ಇದನ್ನು ಅವರು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ. ಒಬ್ಬನು ಒಂದೊಂದೇ ಮೆಟ್ಟಲನ್ನು ಕೆಳಗೆ ಬಿಟ್ಟು ಮಹಡಿಗೆ ಹೋಗುತ್ತಾನೆ. ಅನಂತರ ಮಹಡಿಯು ಯಾವ ಇಟ್ಟಿಗೆ ಗಾರೆ ಮುಂತಾದವುಗಳ ಮೂಲಕ ತಯಾರಾಗಿದೆಯೋ ಅವುಗಳಿಂದಲೇ ಮೆಟ್ಟಲುಗಳೂ ತಯಾರಾಗಿವೆ ಎಂಬುದನ್ನು ಅವನು ಅರಿಯುತ್ತಾನೆ. ಯಾವುದನ್ನು 'ಇದಲ್ಲ ಇದಲ್ಲ' ಎಂದು ಹಿಂದೆ ಬಿಟ್ಟಿದ್ದನೊ ಅದೂ ಆತ್ಮಸ್ವರೂಪವಾಗಿಯೇ ಅವನಿಗೆ ಕಂಡುಬರುತ್ತದೆ. ಆಗ ಅವನ ಅನುಭವಕ್ಕೆ ಬರುತ್ತದೆ :

**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।**
**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ॥**

**(೭ : ೭)**

"ನನಗಿಂತ (ಭಗವಂತನಿಗಿಂತ) ಶ್ರೇಷ್ಠವಾದ ವಸ್ತು ಬೇರೆ ಯಾವುದೂ ಇಲ್ಲ. ದಾರದಲ್ಲಿ ಮಣಿಗಳು ಪೋಣಿಸಲ್ಪಟ್ಟ ಹಾಗೆ ಇವೆಲ್ಲವೂ ನನ್ನಲ್ಲಿ ಪೋಣಿಸಲ್ಪಟ್ಟಿವೆ."

ಅಂದರೆ ಎಲ್ಲ ವಸ್ತುಗಳ ಹಿಂದೆಯೂ ಭಗವಂತನೇ ಓತಪ್ರೋತವಾಗಿರುವುದನ್ನು ಅವನು ಕಾಣುತ್ತಾನೆ. ಸ್ವಾಮಿ ಅದ್ಭುತಾನಂದರು ಒಂದು ಸುಂದರವಾದ ಉದಾಹರಣೆಯ ಮೂಲಕ ಈ ವಿಜ್ಞಾನಾವಸ್ಥೆಯನ್ನು ವಿವರಿಸುತ್ತಾರೆ. ಒಬ್ಬ ಯಜಮಾನನು ಒಂದು ಕೋಸುಗೆಡ್ಡೆಯನ್ನು ಮನೆಗೆ ತಂದು, 'ಇದರಿಂದ ಒಂದು ಪಲ್ಯ ಮಾಡು' ಎಂದು ಅಡುಗೆಯವನಿಗೆ ತಿಳಿಸಿದನು. ಅಡುಗೆಯವನಿಗೆ ಕೋಸು ಹೊಸತು. ಅವನು ಅದರ ಸಿಪ್ಪೆ ಬಿಡಿಸುತ್ತ ಹೋದನು, ಅವನಿಗೆ ಕೋಸುಗೆಡ್ಡೆಯೇ ಸಿಕ್ಕಲಿಲ್ಲ. ಯಜಮಾನನಿಗೆ ತಿಳಿಸಲಾಗಿ, ಅವನು ಬಂದು ಹೇಳಿದನು, "ನೀನು ಯಾವುದನ್ನು ಕೋಸುಗೆಡ್ಡೆಯಲ್ಲ ಎಂದು ತ್ಯಜಿಸಿದೆಯೋ, ಅದೇ ಕೋಸು. ಅದರಿಂದಲೇ ನಾನು ಪಲ್ಯ ಮಾಡಿ ತೋರಿಸುತ್ತೇನೆ, ನೋಡು" ಎಂದು.

ಹೀಗೆ ವ್ಯಕ್ತಿಯು ಇಂದ್ರಿಯ ಜ್ಞಾನದಿಂದ ಪ್ರಾರಂಭಿಸಿ, ವಿಚಾರಪ್ರಪಂಚದಲ್ಲಿ ವಿಹರಿಸಿ, ಕೊನೆಯಲ್ಲಿ ಆಧ್ಯಾತ್ಮಿಕ ವಿಜ್ಞಾನಿಯಾಗುತ್ತಾನೆ. *

### ಸ್ವಾಮಿ ವಿವೇಕಾನಂದರ ಹೃದಯ

**ಸ್ವಾಮೀಜಿಯವರಿಗೆ ಇತರರ ನೋವು–ವೇದನೆಗಳನ್ನು ಸಹಿಸಲಾಗುತ್ತಿರಲಿಲ್ಲ. ಒಮ್ಮೆ ಮಧ್ಯಾಹ್ನ ಊಟದ ಸಮಯದಲ್ಲಿ ಸ್ವಾಮೀಜಿ ತಮ್ಮ ಕೋಣೆಯಲ್ಲಿದ್ದರು. ಬಹಳಷ್ಟು ಬಡಜನರು ಕಾತರರಾಗಿ ಅವರ ಬಾಗಿಲ ಹತ್ತಿರ ಕಾಯುತ್ತ ನಿಂತಿದ್ದರು. ಅವರು ಕಾಯಲು ಕಾರಣವೇನೆಂದು ಕೇಳಿದಾಗ ಗೊತ್ತಾಯಿತು, ಅವರು ಬೇಯಿಸಿದ ಅನ್ನದ ಗಂಜಿಯನ್ನು ಪಡೆಯಲು ಕಾಯುತ್ತಿದ್ದಾರೆಂದು. ಅವರ ಬಡತನವನ್ನು ಕಂಡು ಸ್ವಾಮೀಜಿಯವರಿಗೆ ಅಪಾರ ವ್ಯಥೆಯಾಯಿತು. ಅವರು ಒಡನೆಯೇ ತಮ್ಮ ಅಂದಿನ ಊಟವನ್ನು ಅವರಿಗೇ ಹಂಚಿಕೊಟ್ಟರು.**

*ಸ್ವಾಮಿ ಚೇತನಾನಂದರ 'Various Facts of Swami Vivekananda' ಲೇಖನ, 'Samvit' ಪತ್ರಿಕೆ* ಅನು: ಮಾತಾ ತ್ಯಾಗಮಯೀ




# ಜೀವನ ಮಕರಂದ

('ಬದುಕಲು ಕಲಿಯಿರಿ' ಪುಸ್ತಕದ ಸಂಗ್ರಹ)

ಮೂಲ ಲೇಖಕರು : ಸ್ವಾಮಿ ಜಗದಾತ್ಮಾನಂದ  ಸಂಗ್ರಹ : ಡಾ. ಜಿ.ವಿ. ಕುಲಕರ್ಣಿ

ಅಧ್ಯಾಯ ಐದು

## ಅದ್ಭುತ(ಘಟನೆ)ಗಳು ಸಾರುವ ಸತ್ಯ

**ಮೊದಲು ಜನನವನರಿಯೆ**
**ಮರಣದ ಹದನ ಕಡೆಯಲಿ ತಿಳಿಯೆ**
**ಮಧ್ಯದಲಿ ನಾ ನೆರೆನಿಪುಣನೆಂಬುದು ಬಳಿಕ ನಗೆಗೇಡು!**

–ಕನಕದಾಸ

**"ನಿನಗೆ ಗೊತ್ತಿಲ್ಲದ ವಿಚಾರವನ್ನು ಗೊತ್ತಿಲ್ಲ ಎಂದು ನಮ್ರನಾಗಿ ಒಪ್ಪಿಕೊ. ಅದೇ ನಿನ್ನ ಜ್ಞಾನಕಿಂಡಿಯನ್ನು ತೆರೆಯಬಲ್ಲದು."**

–ಕನ್‌ಫ್ಯೂಶಿಯಸ್ (ಚೀನೀ ತತ್ತ್ವಜ್ಞಾನಿ)

ವೈಜ್ಞಾನಿಕ ಅನ್ವೇಷಣೆಗಳಿಗೆ ತಿಳಿಯದ ಅನೇಕ ಸಂಗತಿಗಳು ಜೀವನದಲ್ಲಿ ನಡೆಯುತ್ತವೆ. ದೇಹಕ್ಕಿಂತ ಭಿನ್ನವಾದ ಜೀವತತ್ತ್ವವಿದೆ ಎಂಬ ಮಾತನ್ನು ವಿಜ್ಞಾನಿಗಳು ಒಪ್ಪುವುದಿಲ್ಲ. 'ಎಲುಬು ರಕ್ತ ಮಾಂಸ ನರವ್ಯೂಹಗಳಿಂದ ಕೂಡಿದ ನಮ್ಮ ಈ ಸ್ಥೂಲ ಶರೀರದಲ್ಲಿ ಅತ್ಯಂತ ಸೂಕ್ಷ್ಮವಾದ ಇನ್ನೊಂದು ಶರೀರವಿದೆ' ಎಂಬುದನ್ನು ನಮ್ಮ ದೇಶದಲ್ಲಿ ಪುರಾತನರು ತಿಳಿದುಕೊಂಡಿದ್ದರು. ಅದನ್ನು ಅವರು 'ಸೂಕ್ಷ್ಮಶರೀರ'ವೆಂದು ಕರೆದರು. ಇದಕ್ಕೆ 'ಲಿಂಗಶರೀರ'ವೆಂಬ ಹೆಸರೂ ಇದೆ. ನಮ್ಮ ಸ್ಥೂಲದೇಹ ಅಳಿದರೂ ಈ ಸೂಕ್ಷ್ಮದೇಹಕ್ಕೆ ನಾಶವಿಲ್ಲ.

ಕ್ರೈಸ್ತಧರ್ಮ, ಮಹಮ್ಮದೀಯ ಧರ್ಮಗಳನ್ನು ಅನುಸರಿಸುವವರು ಪುನರ್ಜನ್ಮ ಹಾಗೂ ಕರ್ಮಸಿದ್ಧಾಂತಗಳಲ್ಲಿ ವಿಶ್ವಾಸವಿಡುವುದಿಲ್ಲ. ಬ್ರೆಜಿಲ್‌ನಲ್ಲಿ ಹಳ್ಳಿಯ ಬಡ ರೈತನೊಬ್ಬ ಮಹಾ ಸರ್ಜನ್ ಆಗಿ ಪರಿವರ್ತನೆಗೊಂಡ ಘಟನೆಯಿದೆ. ಆ ರೈತ ಯಾವುದೇ ವೈದ್ಯಕೀಯ ವ್ಯಾಸಂಗ ಮಾಡಿದವನಲ್ಲ, ಯಾವುದೇ ತರಬೇತಿ ಪಡೆದವನಲ್ಲ. ಅವನು ಶಸ್ತ್ರಕ್ರಿಯೆಗೆ ಬಳಸುತ್ತಿದ್ದ ಉಪಕರಣ ಒಂದು ಪುಟ್ಟ ಚಾಕು. ರೋಗಿಗೆ ಎಚ್ಚರ ತಪ್ಪಿಸದೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡುತ್ತಿದ್ದ. ಜೊತೆಗೆ ಔಷಧ ಸೂಚಿಸಿ ಚೀಟಿಯನ್ನೂ ಸರಸರನೆ ಬರೆದು ಕೊಡುತ್ತಿದ್ದ. ಪ್ರತಿದಿನ ಸಾವಿರಾರು ಜನ ಇವನಲ್ಲಿ ಚಿಕಿತ್ಸೆ ಪಡೆಯಲು ಬರುತ್ತಿದ್ದರಂತೆ. ಇವನ ಶಸ್ತ್ರಕ್ರಿಯೆಯಿಂದ ಕುರುಡರು ಕಣ್ಣು ಪಡೆದರು, ಕುಂಟರು ಊರುಗೋಲು ಎಸೆದು ನಡೆದಾಡಿದರು. ಪೌಲೋ ವಿಶ್ವವಿದ್ಯಾಲಯದ ಮತ್ತು ಮೆಡಿಕಲ್ ಅಕಾಡೆಮಿಯ ಸದಸ್ಯರು ಇವನ ಶಸ್ತ್ರಚಿಕಿತ್ಸೆಯ ವಿಧಾನವನ್ನು ಪ್ರತ್ಯಕ್ಷ ಪರಿಶೀಲಿಸಿದರು, ಮೂಕವಿಸ್ಮಿತರಾದರು. ಅವನ ಹೆಸರು ಜಿ. ಅರ್ಹಿಗೋ. ಅವನು ಚಿಕಿತ್ಸಾಲಯ ಸೇರಿದಾಗ ಡಾ। ಫ್ರಿಟ್ಸ್ ಎಂಬ ಸರ್ಜನ್ನನ ವ್ಯಕ್ತಿತ್ವ ಅವನಲ್ಲಿ ಆವಾಹನೆಯಾಗುತ್ತಿತ್ತು. ಜರ್ಮನ್ ಭಾಷೆ ಅರಿಯದ ಇವನು ಚಿಕಿತ್ಸೆಯಲ್ಲಿ ತೊಡಗಿದಾಗ ಪೋರ್ಚುಗೀಸ್ ಮಿಶ್ರಿತ ಜರ್ಮನ್ ಭಾಷೆಯಲ್ಲಿ ಸಂಭಾಷಣೆ ನಡೆಸುತ್ತಿದ್ದನಂತೆ. ಕ್ರೈಸ್ತ ಧರ್ಮಗುರುಗಳು ಇವನನ್ನು ವಿರೋಧಿಸಿದರು. ಕೊನೆಗೂ ಅವನಿಗೆ ಜೈಲುವಾಸವಾಯಿತು. ಅವನ ಅಭಿಮಾನಿಗಳು ಎಂಟು ಲಕ್ಷ ನಲವತ್ತು ಸಾವಿರ ಡಾಲರ್ ನಿಧಿ ಸಂಗ್ರಹಿಸಿ ಅವನಿಗೆ ಕಳಿಸಿದರು. ಆ ಹಣವನ್ನು ಅವನು ಹಿಂತಿರುಗಿಸಿದ. ರೋಗಿಗಳಿಂದ ಅವನು ಚಿಕ್ಕಾಸೂ ಬಯಸಿರಲಿಲ್ಲ. ೧೯೫೫ ರಿಂದ ೧೯೭೧ ರವರೆಗೆ ಅವನು ಹಲವಾರು ಶಸ್ತ್ರಚಿಕಿತ್ಸೆಗಳನ್ನು ಮಾಡಿದ. ೧೯೭೧ರ ಜನವರಿಯಲ್ಲಿ ರಸ್ತೆ ಅಪಘಾತದಲ್ಲಿ ಅವನು ಮಡಿದ. ಅವನ ಅಭಿಮಾನಿಗಳು ಸಹಸ್ರಸಹಸ್ರ ಸಂಖ್ಯೆಯಲ್ಲಿ ಅವನ ಅಂತ್ಯಯಾತ್ರೆಯಲ್ಲಿ ಭಾಗವಹಿಸುತ್ತ ಅಶ್ರುತರ್ಪಣ ಸಲ್ಲಿಸಿದರು. ಅವನ ಬಗ್ಗೆ ಸಚಿತ್ರ ಲೇಖನ 'ರೀಡರ್ಸ್ ಡೈಜೆಸ್ಟ್' (ಮೇ ೧೯೭೫ ರಲ್ಲಿ) ಪ್ರಕಟವಾಗಿತ್ತು. ಅವನ ಮೈಯಲ್ಲಿ ಆವಾಹಿತನಾಗಿದ್ದ ವ್ಯಕ್ತಿ ಯಾರೆಂದರೆ, ಎರಡನೆಯ ಮಹಾಯುದ್ಧದಲ್ಲಿ ಸರ್ಜನ್ ಆಗಿ ಸೇವೆ ಸಲ್ಲಿಸಬೇಕೆಂದು ಬಯಸಿದ ಡಾ। ಫ್ರಿಟ್ಸ್. ತನ್ನ ಅಕಾಲಿಕ ಮರಣದಿಂದ ಅತೃಪ್ತನಾದ ಅವನು ತನ್ನ ಆಸೆ ಈಡೇರಿಸಿಕೊಳ್ಳಲು ರೈತ ಅರ್ಹಿಗೋನ ದೇಹವನ್ನು ಬಳಸುತ್ತಿದ್ದನಂತೆ.

'ಹುಟ್ಟುವಾಗ ವ್ಯಕ್ತಿ ಎಲ್ಲಿಂದ ಬಂದ? ಸತ್ತಮೇಲೆ ಎಲ್ಲಿಗೆ ಹೋಗುತ್ತಾನೆ?' ಮರಣಾನಂತರ ಜೀವನ, ಜನ್ಮಾಂತರ ಮತ್ತು ಕರ್ಮವಾದ– ಇವುಗಳ ಅಡಿಪಾಯದ ಮೇಲೆ ಹಿಂದೂ, ಬೌದ್ಧ ಹಾಗೂ ಜೈನಧರ್ಮಗಳು ತಮ್ಮ ಸೌಧವನ್ನು ಕಟ್ಟಿವೆ. ಪಶ್ಚಿಮ ದೇಶದ ಧರ್ಮಗಳಲ್ಲಿ ಕರ್ಮ, ಜನ್ಮಾಂತರವಾದಗಳನ್ನು ಒಪ್ಪದಿದ್ದರೂ, ಮರಣಾನಂತರ ಜೀವಾತ್ಮನು ಸ್ವರ್ಗ ಅಥವಾ ನರಕದಲ್ಲಿ ವಾಸಮಾಡುತ್ತಾನೆ ಎಂಬ ಕಲ್ಪನೆಗಳಿವೆ.

ಕೆಲವು ವರ್ಷಗಳಿಂದೀಚೆ ಮನೋವಿಜ್ಞಾನಿಗಳೂ, ಮನೋರೋಗತಜ್ಞರೂ ಅತೀಂದ್ರಿಯ ಅನುಭವಗಳ ಬಗ್ಗೆ ಅಮೇರಿಕಾ ಮತ್ತು ರಶಿಯಾ ದೇಶಗಳಲ್ಲಿ ಸಾಕಷ್ಟು ಸಂಶೋಧನೆ ನಡೆಸಿದರು. ಸ್ವಿಟ್ಜರ್ಲೆಂಡಿನ ಮಹಿಳಾ ವೈದ್ಯೆ ಡಾ। ಎಲಿಜಬೆತ್ ಕುಬ್ಲೇರ್

ರೋಸ್ ಅವರು ಸಾವನ್ನಪ್ಪುವ ಮೊದಲು ರೋಗಿಗಳ ಮಾನಸಿಕ ಸ್ಥಿತಿಗತಿಗಳ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದಾರೆ. 'ಸಾವಿನ ಆಚೆಗೆ ಜೀವನವಿದೆ' ಎಂದು ಢಾಣಾಡಂಗುರವಾಗಿ ಹೇಳುತ್ತಾರೆ. ಅವರು ಹಲವಾರು ಸಂಗತಿಗಳನ್ನು ದಾಖಲಿಸಿದ್ದಾರೆ.

ಅಮೇರಿಕದ ಇಂಡಿಯಾನಾ ಆಸ್ಪತ್ರೆಯಲ್ಲಿ ೪೦ ವರ್ಷದ ಹೆಂಗಸೊಬ್ಬಳು ತುರ್ತು ಶಸ್ತ್ರಚಿಕಿತ್ಸೆಗೆ ಒಳಪಟ್ಟಾಗ ಅವಳು ಅಪೂರ್ವ ಅನುಭವ ಪಡೆದಳಂತೆ. ಅವಳು ದೇಹದ ಹೊರಗೆ ಬಂದು ಆ ಕೋಣೆಯ ಮೇಲ್ಭಾಗದಲ್ಲಿ, ಆಕಾಶದಲ್ಲಿ ಮೋಡವು ತೇಲುವಂತೆ ತೇಲುತ್ತ, ಮಂಚದಲ್ಲಿ ಮಲಗಿದ್ದ ತನ್ನ ಶರೀರವನ್ನು ಕಂಡಳಂತೆ. ಅಪೂರ್ವ ಶಾಂತಿ ಹಾಗೂ ಮುಕ್ತತೆಯ ಅನುಭವ ವನ್ನು ಪಡೆದಳಂತೆ. ಅವಳ ದೇಹದ ಶಸ್ತ್ರಕ್ರಿಯೆಯಲ್ಲಿ ತೊಡಗಿ ಹೆಣಗಾಡುತ್ತಿದ್ದ ಡಾಕ್ಟರರ ಚಟುವಟಿಕೆಗಳನ್ನು ಆಕೆ ಚೆನ್ನಾಗಿ ಪರೀಕ್ಷಿಸಬಲ್ಲವಳಾಗಿದ್ದಳು. ಅವರು ಆಡುವ ಮಾತುಗಳನ್ನು ಅವಳು ಕೇಳುತ್ತಿದ್ದಳು. ಒಬ್ಬ ಡಾಕ್ಟರ್ ನುಡಿದ ಹಾಸ್ಯದ ಚಟಾಕಿ ಯನ್ನೂ ಆಲಿಸಿದಳು. ವೈದ್ಯರೆಲ್ಲ ಸೇರಿ ಅವಳು ಸತ್ತಿದ್ದಾಳೆ ಎಂಬ ಹೇಳಿಕೆ ಇತ್ತರು. ಮೂರು ಗಂಟೆಗಳ ಬಳಿಕ ಅವಳು ತನ್ನ ದೇಹವನ್ನು ಪ್ರವೇಶಿಸಿದಳು. ಎಲ್ಲರಿಗೂ ಅಚ್ಚರಿ. ಮುಂದೆ ಅವಳು ಹದಿನೆಂಟು ತಿಂಗಳು ಬದುಕಿದ್ದಳು.

ಇಂತಹ ನೂರಾರು ಘಟನೆಗಳನ್ನು ಅಧ್ಯಯನ ಮಾಡಿದ ಡಾ। ಎಲಿಜಬೆತ್, 'ತಾನು ಮತಾಂಧಳಲ್ಲದ ಧಾರ್ಮಿಕಳು' ಎನ್ನುತ್ತಾಳೆ.

ಬುದ್ಧಿಭ್ರಮಣೆಯಾದ ವ್ಯಕ್ತಿಗಳು ಮಾತ್ರ ಅತೀಂದ್ರಿಯ ಅನುಭವಗಳನ್ನು ಪಡೆಯಲು ಸಾಧ್ಯ ಎಂಬ ಭಾವನೆ ಹಿಂದೆ ಇತ್ತು. ಕೆಲವು ಮಂದಿ ಮನೋವಿಜ್ಞಾನಿಗಳು ಅಂಥ ಭಾವನೆ ತಪ್ಪು ಎಂದು ಈಗ ಒಪ್ಪಿಕೊಂಡಿದ್ದಾರೆ. ಅಮೇರಿಕದ ಟ್ರಾನ್ಸ್ ಪರ್ಸನಲ್ ಸೈಕಾಲಜಿ ವಿಭಾಗದ ಸಂಶೋಧಕರು ತಮ್ಮ ಪತ್ರಿಕೆಗಳಲ್ಲಿ ಸಾಕಷ್ಟು ಮಾಹಿತಿ ನೀಡಿದ್ದಾರೆ. "ನಾವು ಯಾವು ದನ್ನು ಜೀವತತ್ತ್ವ ಅಥವಾ ಜೀವಾತ್ಮ ಎಂದು ಕರೆಯು ತ್ತೇವೋ, ಅದೊಂದು ನಿರ್ದಿಷ್ಟವಾದ ಶಕ್ತಿ ಮಾತ್ರವಲ್ಲ, ದೇಹದ ಅಳಿವಿನೊಂದಿಗೆ ನಾಶವಾಗದ, 'ಆತ್ಮ' ಎಂದು ಹಿಂದಿನ ಕಾಲದ ಜನರು ಕರೆಯುತ್ತಲಿದ್ದ ತಥ್ಯ ಎಂದು ತಿಳಿಯುವ ಕಾಲ ದೂರವಿಲ್ಲ" ಎಂಬುದು ಅವರ ಅಭಿಪ್ರಾಯವಾಗಿದೆ.

ದೇಹದಿಂದ ಮನಸ್ಸು ಬೇರೆಯಾಗಿರುವುದನ್ನು ತಜ್ಞರು ಕಾಣುತ್ತಿದ್ದಾರೆ. ಕೆಂಟುಕಿಯ ಆಷ್ಟನ್ ಪ್ರಯೋಗಶಾಲೆಯ ಟ್ವೆಮ್ಲೋ ಹಲವು ಪ್ರಯೋಗಗಳ ಬಳಿಕ 'ಆತ್ಮ'ದ ಅಸ್ತಿತ್ವದ ಬಗ್ಗೆ ನಿರ್ಭೀತಿಯಿಂದ ಮಾತನಾಡತೊಡಗಿದ್ದಾರೆ. ಜನ್ಮಾಂತರದ ನೆನಪುಗಳ ಹಲವಾರು ಉದಾಹರಣೆಗಳು ಇಲ್ಲಿವೆ:

ಅಂತೋನಿ ಕ್ರ್ಯಾನ್ಸಿ ಇಟಲಿಯ ಮಿಲಾನ್ ನಗರವಾಸಿ. ಆಗರ್ಭ ಶ್ರೀಮಂತ. ಹೆಂಡತಿ ಹಾಗೂ ಮಗಳೊಂದಿಗೆ ಆತ ಸುಖವಾಗಿ ಬಾಳುತ್ತಿದ್ದ. ಅವನ ಹನ್ನೆರಡು ವರ್ಷದ ಮಗಳನ್ನು ದುಷ್ಟರು ಅಪಹರಿಸಿದರು. ಕೊನೆಗೆ ದೊರೆತದ್ದು ಅವರ ಮಗಳಲ್ಲ, ಮಗಳ ಶವ. ಜೀವನದಲ್ಲಿ ಜುಗುಪ್ಸೆ ಉಂಟಾಗಿ ಅವರು ಮನಃಶಾಂತಿ ಪಡೆಯಲು ಭಾರತಕ್ಕೆ ಬಂದರು. ಶ್ರೀ ಸತ್ಯಸಾಯಿಬಾಬಾ ಅವರಿಂದ ಸಾಂತ್ವನ ಪಡೆದರು. "ನಿಮ್ಮ ಮಗಳು ಹಿಂದಿನ ಜನ್ಮದ ಕರ್ಮದಿಂದಾಗಿ ಅಪಮೃತ್ಯುವಿಗೆ ಈಡಾದಳು. ಮತ್ತೆ ಅವಳು ನಿಮ್ಮ ಮನೆಯಲ್ಲಿ ಹುಟ್ಟಿ ಬರಲಿದ್ದಾಳೆ" ಎಂದು ಬಾಬಾ ಆಶ್ವಾಸನೆ ನೀಡಿದರಂತೆ. ನಂತರ ಅವರಿಗೆ ಎರಡನೆಯ ಮಗಳು ಹುಟ್ಟಿದಳು. ಅವಳು ನೋಡುವುದಕ್ಕೆ ಮೊದಲನೆಯ ಮಗಳಂತೆಯೇ ಇದ್ದಳಂತೆ.

ಮುಂಬೈಯ ಸುಪ್ತಿಶಾಸ್ತ್ರಜ್ಞ ಪ್ರೊ. ಜೆ.ವಿ.ರಾವ್ ಅವರು ವೇದಿಕೆಯ ಮೇಲೆ ಪ್ರದರ್ಶನ ನೀಡುತ್ತಿದ್ದರು. ಒಮ್ಮೆ ಅವರು ಎಂಟು ವರ್ಷದ ಕೆಥೊಲಿಕ್ ಸಂಪ್ರದಾಯದ ತರುಣಿಯನ್ನು ವಶ್ಯಸುಪ್ತಿಗೆ ಒಳಪಡಿಸಿದರಂತೆ. ಅವಳಿಗೆ ಪೂರ್ವಜನ್ಮದ ಸ್ಮರಣೆಯಾಗಿ ಯಾವುದೋ ಭಾಷೆಯಲ್ಲಿ ಮಾತಾಡತೊಡಗಿದಳಂತೆ. ಮುಂದಿನ ಸಾಲಿನಲ್ಲಿ ಕುಳಿತಿದ್ದ ಪಾದ್ರಿಯೊಬ್ಬರು ವೇದಿಕೆಗೆ ಬಂದು, ಅವಳು ಆಡುತ್ತಿರುವ ಭಾಷೆ ಇಟಾಲಿಯನ್ ಎಂದರಂತೆ. ಹಿಂದಿನ ಜನ್ಮದಲ್ಲಿ ತಾನು ಗಂಡಾಗಿದ್ದ ವಿಷಯ, ಇಟಲಿಯಲ್ಲಿ ಬಸ್ ಅಪಘಾತದಲ್ಲಿ ಮರಣ ಹೊಂದಿದ ವಿಷಯ ಇವೆಲ್ಲವನ್ನೂ ಆಕೆ ತಿಳಿಸಿದಳು. ಅವಳು ಪುನಃ ಮೊದಲಿನ ಸ್ಥಿತಿಗೆ ಬಂದಾಗ ಅವಳು ಇಟಾಲಿ ಯನ್ ಅರಿತಿಲ್ಲವೆಂದೂ, ಭಾರತವನ್ನು ಬಿಟ್ಟು ಹೊರ ದೇಶಕ್ಕೆ ಹೋಗಿಲ್ಲವೆಂದೂ ತಿಳಿಯಿತು. ('ಮಿರರ್' ಪತ್ರಿಕೆಯ ೧೯೮೩ರ ಸೆಪ್ಟೆಂಬರ್ ಸಂಚಿಕೆಯಲ್ಲಿ ಇದರ ಬಗ್ಗೆ ಲೇಖನ ಪ್ರಕಟವಾಗಿದೆ.)

ಇದಕ್ಕಿಂತ ರೋಚಕವಾದ ಕತೆ ಮೃದುಲಾ ಶರ್ಮಾ ಎಂಬವಳದು. ಮೃದುಲಾ ಶರ್ಮಾ ಎಂಬ ಗೃಹಿಣಿ ಎಂ.ಎ. ಪದವೀಧರೆ. ಈಕೆ ಮೀರತ್ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾಳೆ. ಹಿಂದಿನ ಜನ್ಮದಲ್ಲಿ ಅವಳು ಮುನ್ನು ಆಗಿದ್ದಳು. ಆಗ ಬನಾರಸ್ ವಿಶ್ವವಿದ್ಯಾಲಯದಿಂದ ಹಿಂದಿ ಎಂ.ಎ. ಪಾಸಾಗಿದ್ದಳು. ಎರಡು ಡಿಗ್ರಿಗಳ ಮಧ್ಯದ ಅಂತರ ಒಂದು ಜೀವನ ಮಾತ್ರ! ೧೯೪೭ ರಲ್ಲಿ ಅವಳು ಡೆಹರಾಡೂನ್‌ನಲ್ಲಿ ತೀರಿಕೊಂಡಿದ್ದಳು. ಅದಕ್ಕೆ ದಾಖಲೆ ಇದೆ. ನಾಲ್ಕು ವರ್ಷಗಳ ನಂತರ, ೧೯೫೧ರಲ್ಲಿ ನಾಸಿಕದಲ್ಲಿ ಜನಿಸಿದಳು. ಹಿಂದಿನ ಜನ್ಮದ ತಾಯಿ ಸತ್ಯವತಿ ಶೆಟ್ಟಿ, ಆ ದಿನಗಳಲ್ಲಿ ಸಾಮಾಜಿಕ ಕಾರ್ಯಕರ್ತೆಯಾಗಿದ್ದಳು. ಈ ಜನ್ಮದ ತಾಯಿ ಶಾಂತಾ ಶಾಸ್ತ್ರಿ. ಇವಳು ಬ್ರಾಹ್ಮಣಳು. ಹಿಂದಿನ ತಾಯಿ ಬನಿಯಾ ಜಾತಿಯವಳು. ಮೃದುಲಾ ಎರಡು ವರ್ಷದ ಕೂಸು ಇರುವಾಗಲೇ ಅವಳಿಗೆ ಪೂರ್ವಜನ್ಮದ ಸ್ಮರಣೆ ಪ್ರಾರಂಭ ವಾಗಿತ್ತಂತೆ. ಪತಿಯ ಅಗಲಿಕೆಯ ತರುವಾಯ ಶಾಂತಾ ಶಾಸ್ತ್ರಿ ದೈವಯೋಗವೋ ಎಂಬಂತೆ ಡೆಹರಾಡೂನಿನ ಒಂದು ಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇರಿ ಅಲ್ಲಿಯೇ ಮಗಳೊಂದಿಗೆ ವಾಸಿಸತೊಡಗಿದಳು.

ಒಂದು ದಿನ ಡೆಹರಾಡೂನಿನಲ್ಲಿ ನಡೆದ ಒಂದು ಧಾರ್ಮಿಕ ಸಭೆಗೆ ತಾಯಿಯ ಜೊತೆಗೆ ಮೃದುಲಾ ಹೋಗಿದ್ದಳು. ಆ ಸಭೆಯಲ್ಲಿ ಮೂಲೆಯಲ್ಲಿ ಕುಳಿತಿದ್ದ ವಯಸ್ಸಾದ ಮಹಿಳೆಯನ್ನು ಗುರುತಿಸಿದಳು. ಆ ವೃದ್ಧೆಯ ಬಳಿಯಲ್ಲಿ ಕುಳಿತ ಇನ್ನೊಬ್ಬ ಹೆಂಗಸಿಗೆ ಹೇಳಿದಳು, 'ನೀನು ನನ್ನ ತಂಗಿ'. ಅವಳಿಗೆ ಅಚ್ಚರಿ. 'ಇದು ಹೇಗೆ ಸಾಧ್ಯ? ನಾನು ದೊಡ್ಡವಳು, ನೀನಿನ್ನೂ ಚಿಕ್ಕ ಮಗು.' ಆಗ ಮೃದುಲಾ ಅಂದಳು, ನಾನು ನಿನ್ನ ಹಿರಿಯ ಅಕ್ಕ ಮುನ್ನೂ.' ಅವಳಿಗೆ ಪರಮಾಶ್ಚರ್ಯ. ತಾಯಿ ಸತ್ಯವತಿಗೆ ನಂಬಿಕೆಯಾಗಲಿಲ್ಲ. ಪರೀಕ್ಷಿಸಿ ನೋಡುವ ಕುತೂಹಲದಿಂದ ಮಗುವನ್ನು ಮನೆಗೆ ಕರೆದೊಯ್ದರು. ಮನೆಯವರನ್ನೆಲ್ಲ ಗುರುತಿಸಿದಳು. ತನ್ನ ಪುಸ್ತಕದ ಬೀರು ತೋರಿಸಿದಳು. ಅಲ್ಲಿಯ ಫ್ಯಾನ್ ನೋಡಿ ಹಿಂದೆ ಇದು ಇರಲಿಲ್ಲ ಎಂದಳು. ಕುಶಾಲಚಂದ ಎಂಬವರು ಆನಂದಸ್ವಾಮಿ ಆಗಿದ್ದರು. ಅವರನ್ನು ಗುರುತಿಸಿ, 'ಸ್ವಾಮಿ, ನೀವು ಯಾವಾಗಿನಿಂದ ಕಾವಿ ಬಟ್ಟೆ ತೊಡಲು ಪ್ರಾರಂಭಿಸಿದಿರಿ? ಮೊದಲು ಬಿಳಿಯ ಬಟ್ಟೆ ಧರಿಸುತ್ತಿದ್ದಿರಿ.' ಎಂದಾಗ ಅವರಿಗೆ ಅಚ್ಚರಿ. ಮರೆಯಿಂದ ಎಲ್ಲವನ್ನೂ ನೋಡುತ್ತ ಆಲಿಸುತ್ತ ನಿಂತಿದ್ದ ಹಿಂದಿನ ಜನ್ಮದ ತಂದೆ ಅಂದರು, 'ಮಗೂ, ನೀನು ಎಲ್ಲರನ್ನೂ ಗುರುತಿಸಿದೆ, ಆದರೆ ಮನೆಯಲ್ಲಿದ್ದ ನಿನ್ನ ಸೇವಕರನ್ನು ಗುರುತಿಸಲಿಲ್ಲ.' ಅವರನ್ನು ತಬ್ಬಿಕೊಂಡು ಮೃದುಲಾ ಹೇಳಿದಳು, 'ನೀವು ಸೇವಕರಲ್ಲ, ನನ್ನ ಅಪ್ಪ.' ಎಲ್ಲರಿಗೂ ಪರಮ ಸಂತೋಷವಾಯಿತು. ಅವರೆಲ್ಲ ಪ್ರೀತಿಯ ಹೊನಲನ್ನೇ ಹರಿಸಿದರು. ಇಬ್ಬರು ತಾಯಂದಿರ ಪ್ರೀತಿಯನ್ನು ಪಡೆದು ಬೆಳೆದಳು ಮೃದುಲಾ. ಅವಳ ಮದುವೆಯ ಸಮಯ ದಲ್ಲಿ ಹಿಂದಿನ ಜನ್ಮದ ತಂದೆತಾಯಿ ಅವಳಿಗೆ ಚಿನ್ನಾ ಭರಣ, ನಗದು ಹಣ, ಅಷ್ಟೇ ಅಲ್ಲ ಒಂದು ಬಂಗಲೆಯನ್ನು ಉಡುಗೊರೆಯಾಗಿ ಕೊಟ್ಟರಂತೆ.

ಇವೆಲ್ಲವೂ ಭ್ರಾಮಕ ಕಲ್ಪನೆಯೆಂದು, ಕತೆಯೆಂದು ತಳ್ಳಿಹಾಕ ಬಹುದಾಗಿತ್ತು. ಆದರೆ ವರ್ಜೀನಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಯಾನ್ ಸ್ಟೀವನ್‌ಸನ್ ಇವಳನ್ನು ಕಾಣಲು ೧೯೭೪ರ ಮಾರ್ಚ್ ೧೮ಕ್ಕೆ ಭಾರತಕ್ಕೆ ಬಂದರು. ಇವಳನ್ನು ಚೆನ್ನಾಗಿ ಪರೀಕ್ಷಿಸಿ, 'ಇದು ಪುನರ್ಜನ್ಮಕ್ಕೊಂದು ಸ್ಪಷ್ಟವಾದ ಸಾಕ್ಷ್ಯಾಧಾರ' ಎಂದರು. ಪುನರ್ಜನ್ಮವಲ್ಲದೆ ಬೇರಾವ ಅರ್ಥ, ವಿವರಣೆಯನ್ನೂ ಇದಕ್ಕೆ ಕೊಡಲು ಸಾಧ್ಯವಿಲ್ಲ ಎಂದು ಮನ ಗಂಡ ಬಳಿಕ ಅವರು ತಮ್ಮ ದೇಶಕ್ಕೆ ಮರಳಿದರು.

ಮೃದುಲಾ ಶರ್ಮಾ ಐದು ವರ್ಷದ ಬಾಲಿಕೆಯಾಗಿದ್ದಾಗ ತನ್ನ ತಾಯಿಯೊಂದಿಗೆ ಹೋಗಿ ಹೃಷೀಕೇಶದ ಸ್ವಾಮಿ ಶಿವಾ ನಂದರನ್ನು ಭೇಟಿಯಾಗಿದ್ದಳು. ಸ್ವಾಮಿ ಶಿವಾನಂದರು ತಮ್ಮ ಬರಹದಲ್ಲಿ ಈ ವಿಚಾರ ಸೂಚಿಸಿದ್ದಾರಂತೆ. ಇಷ್ಟೆಲ್ಲ ವಿವರ ವಾಗಿ ಮೃದುಲಾ ಬಗ್ಗೆ ಬರೆಯಲು 'ದಿ ಟೈಮ್ಸ್ ಆಫ್ ಇಂಡಿಯಾ'ದ ೧೯೭೬ ರ ಅಕ್ಟೋಬರ್ ೩೧ರ (ಭಾನುವಾರ) ಸಂಚಿಕೆಯಲ್ಲಿ ಪ್ರಕಟಗೊಂಡ ಸಚಿತ್ರ ಲೇಖನವೇ ಆಧಾರ.

ಅತೀಂದ್ರಿಯ ವಿಜ್ಞಾನದ ಕೊಡುಗೆಗಳ ಬಗ್ಗೆ ಸೋವಿಯೆಟ್ ರಷ್ಯಾದಲ್ಲಿ ಕೂಡ ಬಹಳ ಅಭ್ಯಾಸ ನಡೆದಿದೆ. ಅಲ್ಲಿ ೧೫೦ರಷ್ಟು ಗ್ರಂಥಗಳು ಪ್ರಕಟವಾಗಿವೆ.

ಎಲುಬು, ರಕ್ತ, ಮಾಂಸ, ನರವ್ಯೂಹಗಳಿಂದ ಕೂಡಿದ ಮನುಷ್ಯ ಶರೀರದ ಹಿನ್ನೆಲೆಯಲ್ಲಿ, ಸಾಮಾನ್ಯ ದೃಷ್ಟಿಗೆ ಗೋಚರಿಸದ, ಭಾರತದಲ್ಲಿ ಪುರಾತನ ಕಾಲದಿಂದಲೂ ಯೋಗಿಗಳಿಗೆ ಗೋಚರಿಸಿವೆಯೆಂದು ಹೇಳಲಾದ, ಅತ್ಯಂತ ಸೂಕ್ಷ್ಮವಾದ ಚೈತನ್ಯಮಯ ಶರೀರವಿದೆ ಎಂಬ ಸೂಚನೆ ರಷ್ಯನ್ ಸಂಶೋಧಕರಿಗೆ ಸುಮಾರು ೧೯೩೯ರ ಹೊತ್ತಿಗೆ ಲಭಿಸಿತ್ತು. ಆಗಲೇ ದಕ್ಷಿಣ ರಷ್ಯಾದ ಕ್ಯೂಬಾನ್ ಪ್ರಾಂತದ ಕ್ರಸ್ನೋದರ್ ಎಂಬಲ್ಲಿ ಸಂಶೋಧನೆ ಪ್ರಾರಂಭವಾಗಿತ್ತು. ಮನುಷ್ಯದೇಹದಲ್ಲಿ ಸೂಕ್ಷ್ಮಾತಿಸೂಕ್ಷ್ಮ ರೂಪದಿಂದಿರುವ ಈ ಚೈತನ್ಯಶರೀರವನ್ನು ಗುರುತಿಸಲು ಅಗತ್ಯವಾದ ಕೆಲವೊಂದು ಉಪಕರಣಗಳನ್ನು ಸಜ್ಜುಗೊಳಿಸಲು ತಜ್ಞರನ್ನು ಹುಡುಕುತ್ತಿದ್ದರು. ಅವರಿಗೆ ಸಹಾಯಕನಾಗಿ ಬಂದ ತಾಂತ್ರಿಕಜ್ಞನೇ ಸಮ್ಯೋನ್ ಡೆವಿಡೊವಿಚ್ ಕಿರ್ಲಿಯನ್.

ಮನುಷ್ಯದೇಹದಿಂದ ಹೊರಹೊಮ್ಮುವ ಒಂದು ವಿಶಿಷ್ಟ ಚೈತನ್ಯವು ವಿದ್ಯುತ್ತಿನ ಪ್ರವಾಹವನ್ನು ಪ್ರಭಾವಗೊಳಿಸುವುದೆಂದು ತಜ್ಞರು ಹೇಳುತ್ತಾರೆ. ದೇಹದಿಂದ ಹೊರಹೊಮ್ಮುವ ಆ ಚೈತನ್ಯ ಅಥವಾ ಪ್ರಭಾವಲಯದ ಫೋಟೋ ತೆಗೆಯಲು ನಮ್ಮ ದೇಹವನ್ನು ಅಥವಾ ಯಾವುದಾದರೊಂದು ಅಂಗವನ್ನು ಅಧಿಕ ಶಕ್ತಿಯ ವಿದ್ಯುತ್ ಪ್ರವಾಹಕ್ಷೇತ್ರದ ಸಮೀಪ ಇರಿಸಬೇಕು. ಆಗ ಹೊರಹೊಮ್ಮುವ ಚೈತನ್ಯವು ವಿದ್ಯುತ್ ಕ್ಷೇತ್ರದ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆಗ ಅವುಗಳ ಬಣ್ಣವೂ ಬದಲಿಸುತ್ತದೆ. ಕಿರ್ಲಿಯನ್ ಸಿದ್ಧಪಡಿಸಿದ ಪರಿಷ್ಕೃತ ಉಪಕರಣದಿಂದ ಅವುಗಳ ಸ್ಥಿತ್ಯಂತರ, ಗತಿವೈಚಿತ್ರ್ಯ, ವರ್ಣ ವೈವಿಧ್ಯಗಳನ್ನು ಕಾಣಬಹುದು. ಕಿರ್ಲಿಯನ್ ಉಪಕರಣ ವಿದ್ಯುತ್ ಅಲ್ಲದ 'ಚೈತನ್ಯ' ವನ್ನು ಒಂದು ರೀತಿ ವಿದ್ಯುತ್ತಾಗಿ ಪರಿವರ್ತಿಸಿ ನಮ್ಮ ದೃಷ್ಟಿಗೆ ನಿಲುಕುವಂತೆ ಮಾಡುತ್ತದೆ.

ಕಿರ್ಲಿಯನ್ ಉಪಕರಣದ ಮೂಲಕ ಈ ಸೂಕ್ಷ್ಮದೇಹದ ಅಥವಾ ಶಕ್ತಿದೇಹದ ರೋಮಾಂಚಕಾರಿ ಅದ್ಭುತ ದೃಶ್ಯವನ್ನು ವೀಕ್ಷಿಸಿದವರು ಅತೀಂದ್ರಿಯ ವಿಚಾರದಲ್ಲಿ ಸಾಮಾನ್ಯ ಕುತೂಹಲಿಗಳಾದ ಜನರಲ್ಲ. ಸೋವಿಯತ್ ದೇಶದ 'ಪ್ರಿಸೀಡಿಯಮ್ ಆಫ್ ದಿ ಅಕಾಡೆಮಿ ಆಫ್ ಸೈನ್ಸಸ್' ನ ಮೇಧಾವಿ ಸಂಶೋಧಕ ವಿಜ್ಞಾನಿಗಳು ಎನ್ನುತ್ತಾರೆ.

ಭಾರತೀಯರಿಗೆ ಅಸಡ್ಡೆ ಏಕೆ? ಜಗತ್ತಿನಲ್ಲಿ ಇಷ್ಟೊಂದು ಸಂಶೋಧನೆ ನಡೆಯುತ್ತಿರುವಾಗ, ಭಾರತದಲ್ಲಿ ಇಂದು ಆಂಗ್ಲ ವಿದ್ಯಾಭ್ಯಾಸ ಮಾಡಿದ ಯಾವ ವ್ಯಕ್ತಿಗಾದರೂ ಈ ಹಳೆಯ ಸಿದ್ಧಾಂತಗಳು ಮೂಢನಂಬಿಕೆಯ ಕಂತೆ, ಪಾಮರರನ್ನು ವಂಚಿಸಲು ಮಾಡಿದ ಸಂಚು ಎನ್ನುವ ಭಾವನೆ ರೂಢಮೂಲವಾಗುತ್ತಿದೆ. ಆಧುನಿಕ ವಿಜ್ಞಾನದ